# <u>4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು</u>

**ಎಸ್‌ಸಿ. 386/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಅಮ್ಜದ್ ಪಾಷ | <u>ಪ್ರಮಾಣ ಮಾಡಿಸಿದ ದಿನಾಂಕಃ</u> | |
| ತಂದೆ/ಗಂಡನ ಹೆಸರು | ಃ ಶ್ರೀ ಮುನಾವರ್ ಅಹಮದ್ | 01.03.2024 | |
| ವಯಸ್ಸು | ಃ 30 ವರ್ಷ | | |
| ವೃತ್ತಿ | ಃ ಕ್ಲೀನರ್ ಕೆಲಸ | ಪ್ರಾ.ಸಾ. | ಃ 01 |
| ವಾಸಸ್ಥಳ | ಃ ನಂಜನಗೂಡು | ಚಾ.ಸಾ. | ಃ 07 |

<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>

. ಕೋರ್ಟ್ ಮುಂದೆ ಇರುವ ಆರೋಪಿತನನ್ನು ಈ ಮೊದಲು ನಾನು ಎಲ್ಲಿಯೂ ನೋಡಿಲ್ಲ. ನಂಜನಗೂಡು ಪೋ.ಠಾಣೆಯ ಮಹಿಳಾ ಪಿ.ಎಸ್.ಐ ರವರು ಕೋರ್ಟ್ ಮುಂದೆ ಇರುವ ಆರೋಪಿತನು ಸೀಟ್ ಬೆಲ್ಟ್ ಹಾಕದೇ ಕಾರು ಚಲಾಯಿಸುತ್ತಿದ್ದಾಗ ಆತನಿಗೆ ದಂಡ ಕಟ್ಟು ಎಂದು ಹೇಳಿದಾಗ ಆರೋಪಿತ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಕಾರು ಹತ್ತಿಸಲು ಪ್ರಯತ್ನ ಮಾಡಿದ್ದನ್ನು ನಾನು ನೋಡಿಲ್ಲ. ಆ ರೀತಿಯ ಗಲಾಟೆ ಕಾಲಕ್ಕೆ ನಾನು ಜಗಳ ಬಿಡಿಸಿಲ್ಲ ಮತ್ತು ಆ ಬಗ್ಗೆ ಹೇಳಿಕೆ ಕೊಟ್ಟಿಲ್ಲ. ಈಗ ಕೋರ್ಟ್ ಮುಂದೆ ಆರೋಪಿತ ಹಾಜರುಪಡಿಸಿರುವ ಕೆಎ-***41***-ಎಂಸಿ-***4591*** ಸಂಖ್ಯೆಯ ಕಾರನ್ನು ನಾನು ಈ ಮೊದಲು ಎಲ್ಲಿಯೂ ನೋಡಿಲ್ಲ.

*<u>ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>*

*<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>*

*2.* ದಿಃ*01.11.2019* ರಂದು ಸಂಜೆ ***5.30*** ಕ್ಕೆ ನಾನು ಮತ್ತು ಚಾ.ಸಾ-***6*** ಮಹದೇವಸ್ವಾಮಿ ನಂಜನಗೂಡಿನ ಬಿ.ಡಿ.ಓ ಆಫೀಸಿನ ಮುಂಭಾಗ ಆಟೋದಲ್ಲಿ ಮಾತನಾಡುತ್ತಾ ಕುಳಿತಿದ್ದಾಗ

ತೋಟಗಾರಿಕೆ ಕಛೇರಿ ಹತ್ತಿರ ಟ್ರಾಫಿಕ್ ಪಿ.ಎಸ್.ಐ ಶಿವಮ್ಮ ಇವರ ಬಳಿ ಕೋರ್ಟ್ ಮುಂದೆ ಇರುವ ಆರೋಪಿತ ಗಲಾಟೆ ಮಾಡುತ್ತಿದ್ದಾಗ ನಾವಿಬ್ಬರು ಅಲ್ಲಿಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಆ ಕಾಲಕ್ಕೆ ಮಹಿಳಾ ಪಿ.ಎಸ್.ಐ ರವರು ಆರೋಪಿತನಿಗೆ ಸೀಟ್ ಬೆಲ್ಟ್ ಹಾಕದ ಕಾರಣ *500/-* ದಂಡ ಕಟ್ಟಬೇಕು ಎಂದು ಹೇಳಿದ್ದ ಕಾರಣ ಆರೋಪಿತ ನಾನು ದಂಡ ಕಟ್ಟುವುದಿಲ್ಲ ಎಂದು ಸದರಿ ಪಿ.ಎಸ್.ಐ ಮೇಲೆ ಕಾರನ್ನು ಹತ್ತಿಸಲು ಪ್ರಯತ್ನ ಮಾಡಿದ್ದ ಎಂದರೆ ಸರಿಯಲ್ಲ. ಆಗ ಯಾಕೆ ಈ ರೀತಿ ಮಾಡುತ್ತೀಯ ಎಂದು ಕೇಳಿದಾಗ ಆರೋಪಿತ ಕಾರಿನಿಂದ ಇಳಿದು ಮಹಿಳಾ ಪಿ.ಎಸ್.ಐ ಗೆ ಅವಾಚ್ಯ ಶಬ್ದಗಳಿಂದ ಬೈದು, ಪ್ರಾಣ ಬೆದರಿಕೆ ಹಾಕಿ, ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದ ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾ.ಸಾ-*6* ಮಹದೇವಸ್ವಾಮಿ ಮತ್ತು ಪೋಲೀಸ್ ಸಿಬ್ಬಂದಿಗಳು ಜಗಳ ಬಿಡಿಸಿ ಸಮಾಧಾನ ಮಾಡಿದ್ದೇವು ಎಂದರೆ ಸರಿಯಲ್ಲ. ನಂತರ ಆರೋಪಿತ *500/-* ಕೊಟ್ಟು ರಶೀದಿ ಪಡೆದು ಪಿ.ಎಸ್.ಐ ಗೆ ಪ್ರಾಣ ಬೆದರಿಕೆ ಹಾಕಿ ಅಲ್ಲಿಂದ ಹೊರಟುಹೊಗಿದ್ದ ಎಂದರೆ ಸರಿಯಲ್ಲ. ಈ ಕುರಿತು ದಿಃ*01.11.2019* ------ ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*1* ಎಂದು ಗುರುತಿಸಿದೆ. ಈ ಆರೋಪಿತನೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರವರಿಂದಃ- ಇಲ್ಲ

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು